■ ವಿಶಾಖ ಎನ್.

# ರಸೂಲ್‌ಗೆ ರಜನಿ ಸಿನಿಮಾ ನಿರ್ದೇಶಿಸುವಾಸೆ





ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಧ್ವನಿ ವಿನ್ಯಾಸಕಾರ ರಸೂಲ್ ಪೂಕುಟ್ಟಿ ಅವರಿಗೆ ಮಹದಾಸೆಯೊಂದಿದೆ – ಹಿಂದಿಯಲ್ಲಿ ರಜನೀಕಾಂತ್ ಅವರನ್ನು ನಾಯಕರನ್ನಾಗಿಸಿ, ಒಂದು ಸಿನಿಮಾ ನಿರ್ದೇಶನ ಮಾಡಬೇಕು ಎನ್ನುವುದು. ಕಥಾ ಎಳೆಯೊಂದು ಈಗಾಗಲೇ ಅವರ ತಲೆಯಲ್ಲಿ ಇದೆ. ಅದನ್ನು ರಜನೀಕಾಂತ್ ಅವರಿಗೆ ಹೇಳಬೇಕು; ಅದಕ್ಕೆ ಅವರು ಒಪ್ಪಿದರೆ ಸ್ವರ್ಗಕ್ಕೆ ಮೂರೇ ಗೇಣು ಎಂಬ ಧಾಟಿಯಲ್ಲಿ ರಸೂಲ್ ಮಾತನಾಡಿದ್ದಾರೆ.

ಧ್ವನಿ ವಿನ್ಯಾಸವನ್ನೇ ವಿಶೇಷ ಕೌಶಲವೆಂದು ಪರಿಗಣಿಸುತ್ತಾ, ಅದರ ಮೂಲಕವೇ ಸಿನಿಮಾಗಳಲ್ಲಿ ಛಾಪು ಮೂಡಿಸುತ್ತಾ ಬಂದವರು ರಸೂಲ್. ಈಗ ಅವರು ‘ಒಟ್ಟಾ’ ಎಂಬ ಮಲಯಾಳಂ ಸಿನಿಮಾ ನಿರ್ದೇಶಿಸಿದ್ದಾರೆ. ಕಳೆದ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಚಿತ್ರ ಬಿಡುಗಡೆಯಾಗಿದೆ.

ರಸೂಲ್ ತಾವು ನಿರ್ದೇಶಕ ಆಗಬೇಕು ಎಂದು ಮೊದಲು ಅಂದುಕೊಂಡಿರಲಿಲ್ಲ. ‘ಒಟ್ಟಾ’ ಚಿತ್ರವನ್ನು ನಿರ್ಮಿಸುವುದಷ್ಟೇ ಅವರ ಬಯಕೆಯಾಗಿತ್ತು. ಅದಕ್ಕೆ ಏನು ಬೇಕೋ ಅಷ್ಟು ಸಿದ್ಧತೆಯನ್ನು ಮಾಡಿಕೊಂಡಿದ್ದರು. ಅವರ ಸ್ನೇಹಿತರೊಬ್ಬರು ನಿರ್ದೇಶಿಸಬೇಕಿತ್ತು. ಚಿತ್ರಕಥಾ ಬರವಣಿಗೆ ಆಗಿ. ಕೆಲವು ಹಂತಗಳ ಮಾತುಕತೆ ನಡೆದ ಮೇಲೆ, ಅಂದುಕೊಂಡಂತೆ ಯಾವುದೂ ಕೈಗೂಡಲಿಲ್ಲ. ಕೊನೆಗೆ, ಸ್ವತಃ ತಾವೇ ಸಿನಿಮಾ ನಿರ್ದೇಶಿಸುವ ಪರಿಸ್ಥಿತಿ ಸೃಷ್ಟಿಯಾಯಿತು. ಆಸಿಫ್ ಅಲಿ, ಅರ್ಜುನ್ ಅಶೋಕನ್, ಇಂದ್ರಜಿತ್, ಸತ್ಯರಾಜ್, ರೋಹಿಣಿ, ಸುಕುಮಾರನ್, ಆದಿಲ್ ಹುಸೇನ್, ದಿವ್ಯಾ ದತ್ತ ಅಭಿನಯಿಸಿರುವ ‘ಒಟ್ಟಾ’ ಸಿನಿಮಾದಲ್ಲಿ ಮಕ್ಕಳ ಬದುಕಿನ ಕಥನವಿದೆ. ಎಸ್. ಹರಿಹರನ್ ಬರೆದಿರುವ ‘ರನ್‌ಅವೇ ಚಿಲ್ಡ್ರನ್’ ಎಂಬ ಕೃತಿಯನ್ನು ಆಧರಿಸಿದ ಸಿನಿಮಾ ಇದಾಗಿದ್ದು, ವಿಮರ್ಶಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ನಿರ್ದೇಶಕನಾದ ಮೇಲೆ ಹಲವು ಸೂಕ್ಷ್ಮ ಸಂಗತಿಗಳನ್ನು ತಾವು ಕಲಿತಿರುವುದಾಗಿ ಹೇಳಿರುವ ರಸೂಲ್, ಮುಂದೆ ರಜನೀಕಾಂತ್ ಸಿನಿಮಾ ಮಾಡುವ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಅವರ ಚಿತ್ರಕಥೆಯನ್ನು ರಜನೀಕಾಂತ್ ಒಪ್ಪಬೇಕಷ್ಟೆ. ■

# ಯಾಂತ್ರಿಕ ಬುದ್ಧಿಮತ್ತೆ... ಸಮಸ್ಯೆಗಳ ಮರುಕಳಿಕೆ



ರಶ್ಮಿಕಾ ಮಂದಣ್ಣ ಹಾಗೂ ಕತ್ರಿನಾ ಕೈಫ್ ಇಬ್ಬರ ಡೀಪ್‌ಫೇಕ್ ವಿಡಿಯೊಗಳು ವೈರಲ್ ಆದ ಬೆನ್ನಿಗೇ ಕೇಂದ್ರ ಸರ್ಕಾರವು ಇಂತಹ ದುಷ್ಕೃತ್ಯ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದೆ. ಆದರೆ, ಈಗಾಗಲೇ ಎಷ್ಟೋ ಜನಪ್ರಿಯ ನಟ–ನಟಿಯರ ಮಾರ್ಫ್ ಮಾಡಿದ ಫೋಟೊಗಳು ವೈರಲ್ ಆಗಿ ಸದ್ದು ಮಾಡಿರುವ ಪ್ರಸಂಗಗಳಿವೆ. ಸೆಕ್ಸ್ ವಿಡಿಯೊಗಳಲ್ಲಿ ಜನಪ್ರಿಯರ ಮುಖಗಳನ್ನು ಇನ್ಯಾರದ್ದೋ ಮುಖಗಳಿರುವ ವಿಡಿಯೊಗಳಿಗೆ ಹೊಂದಿಸಿ, ಪ್ರಚಾರ ಗಿಟ್ಟಿಸಿಕೊಂಡಿರುವ ಅಸಂಖ್ಯ ಉದಾಹರಣೆಗಳಿವೆ.

ನಟಿ ಜಯಪ್ರದಾ ಅವರಿಗೆ ಈಗ 56 ವರ್ಷ ವಯಸ್ಸು. ಹಿಂದೊಮ್ಮೆ ಮಾರ್ಫ್ ಮಾಡಲಾಗಿದ್ದ ಫೋಟೊ ವಿಷಯದ ಕುರಿತು ತಮ್ಮ ಅನುಭವವನ್ನು ಅವರು ಹಂಚಿಕೊಂಡಿದ್ದರು. ಮಾರ್ಫ್ ಮಾಡಿದ ಫೋಟೊ ನೋಡಿದ್ದೇ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಅವರಿಗೆ ಅನಿಸಿತ್ತಂತೆ. ಸ್ವಲ್ಪ ಹೆಚ್ಚುಕಡಿಮೆ ಆಗಿದ್ದರೂ ತಾವು ಉಳಿಯುತ್ತಿರಲಿಲ್ಲ ಎಂದು ಅವರು ಸಂದರ್ಶನವೊಂದರಲ್ಲಿ ಹಂಚಿಕೊಂಡಿದ್ದರು.

ಕೇರಳದ ಅನಘಾ ಕೆ. ಎಂಬ ಯುವತಿ ಇನ್‌ಸ್ಟಾಗ್ರಾಂ ಪೋಸ್ಟ್‌ಗಳಿಂದಲೇ ಹೆಸರಾಗಿದ್ದವರು. ಅವರು ಸಾಮಾಜಿಕ ಮಾಧ್ಯಮದಿಂದಾಗಿ ತಮ್ಮ ಬದುಕಿನ ಕೆಲವು ವರ್ಷಗಳು ಯಾತನೆಯಲ್ಲಿ ಮುಳುಗಿದ್ದನ್ನು ಹಂಚಿಕೊಂಡಿದ್ದರು. ವಾಟ್ಸ್‌ಆ್ಯಪ್ ಗ್ರೂಪ್ ಮಾಡಿ, ಅದರಲ್ಲಿ ಮಾರ್ಫ್ ಮಾಡಿದ ಫೋಟೊಗಳನ್ನು ಹರಿಬಿಟ್ಟಿದ್ದರಿಂದ ಅವರಿಗೆ ಹಾಗೂ ಅವರ ಸ್ನೇಹಿತೆಯರಿಗೆ ಆದ ಸಂಕಟವನ್ನು ಹೇಳಿಕೊಂಡಿದ್ದರು. ಸಿನಿಮಾ ಅಭಿನಯದಲ್ಲೂ ಪಳಗಬೇಕು ಎಂಬ ತಮ್ಮ ಕನಸನ್ನು ಅದೇ ಕಾರಣಕ್ಕೆ ನನಸು ಮಾಡಿಕೊಳ್ಳಲು ಆಗಲಿಲ್ಲ ಎಂದೂ ತಿಳಿಸಿದ್ದರು.

ಅಮಿತಾಭ್ ಬಚ್ಚನ್ ಅವರಂತಹ ಹಿರಿಯ ನಟರೂ ಈಗ ಡೀಪ್‌ಫೇಕ್ ವಿರುದ್ಧ ಧ್ವನಿ ಎತ್ತಿರುವುದರಿಂದ ಕೃತಕ ಬುದ್ಧಿಮತ್ತೆ ಬಳಸಿ ಕುಚೇಷ್ಟೆ ಮಾಡುವವರಿಗೆ ಬಿಸಿ ಮುಟ್ಟುವ ನಿರೀಕ್ಷೆ ಇದೆ. ■